# ನಂಬಿಕೆ ಮತ್ತು ನಿಜ

ಜೀವನದಲ್ಲಿ ನಂಬಿಕೆಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಯಾವುದೇ ವಿಷಯದಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ನಮ್ಮ ನಂಬಿಕೆಗಳನ್ನು ಆಶ್ರಯಿಸಿರುತ್ತವೆ. ಆ ನಿರ್ಧಾರಗಳೇ ನಮ್ಮ ಮುಂದಿನ ಬದುಕನ್ನು ರೂಪಿಸುತ್ತವೆ. ಈ ನಂಬಿಕೆಗಳು ನಮ್ಮೊಳಗೆ ರೂಪುಗೊಳ್ಳುವುದಕ್ಕೆ ಬಹುಮುಖೀಯ ಕಾರಣಗಳಿರುತ್ತವೆ. ಹುಟ್ಟಿನ ಮೂಲ, ಬೆಳೆದು ಬಂದ ಪರಿಸರ, ಆಯ್ದುಕೊಂಡ ಜ್ಞಾನಮಾರ್ಗ ಇತ್ಯಾದಿ. ನಮ್ಮ ಆಲೋಚನೆಗಳೆಲ್ಲವೂ ಆ ನಂಬಿಕೆಗಳನ್ನು ಅನುಸರಿಸಿಯೇ ನಡೆಯುತ್ತವೆ. ನಮ್ಮದು ಗೊಡ್ಡುನಂಬಿಕೆಯಾದರೆ ಆಲೋಚನೆಗಳೂ ಗೊಡ್ಡಾಗಿರುತ್ತವೆ. ಅದನ್ನು ಬದಲಿಸಿಕೊಳ್ಳುವುದು ಕಷ್ಟಸಾಧ್ಯ. ಕೇವಲ ನಂಬಿಕೆಯನ್ನೆ ಅನುಸರಿಸಿ ನಡೆದರೆ ನಿಜವನ್ನು ಕಾಣುವುದು ಕಷ್ಟ. ನಂಬಿಕೆ ನಿಜವನ್ನು ಮಸುಕಾಗಿಸಿಬಿಡುತ್ತದೆ. ಅದಕ್ಕೆ ತೆರೆದ ಮನಸ್ಸಿನ ವಿಶ್ಲೇಷಣೆ ಅಗತ್ಯ.

ಇತ್ತೀಚೆಗೆ ಕೆಲವು ಸ್ವಹಿತಾಸಕ್ತಿಗಳಿಂದ, ಏಳು ಸಾವಿರ ವರ್ಷಗಳ ಹಿಂದೆಯೆ ಭರತಭೂಮಿಯಲ್ಲಿ ವಿಜ್ಞಾನವಿತ್ತು, ವಿಮಾನದಂತಹ ಆವಿಷ್ಕಾರಗಳಿದ್ದವು, ವೈದ್ಯಶಾಸ್ತ್ರದಲ್ಲಿ ಪ್ಲಾಸ್ಟಿಕ್ ಸರ್ಜರಿಯನ್ನು ಹೋಲುವ ಅಂಗಾಂಗ ಜೋಡನೆಯಿತ್ತು ಎಂಬಂತಹ ಹೇಳಿಕೆಗಳು ಭರಪೂರ ಬರುತ್ತಿವೆ. ಅದಕ್ಕೆ ಮಹಾಭಾರತದ ಕರ್ಣ, ಆನೆಯ ಮುಖವನ್ನು ಹೊತ್ತ ಗಣಪತಿ ಇವೇ ಉದಾಹರಣೆಗಳು. ಕೆಲವರು ಈಗಷ್ಟೇ ನಡೆದ ರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ವಿಷಯ ಮಂಡನೆಗೆ ಜಾಗವನ್ನೂ ಗಿಟ್ಟಿಸಿಕೊಂಡಿದ್ದಾರೆ. ಆದರೆ ಅವರ್‍ಯಾರೂ ಸಹ ಆ ಹೇಳಿಕೆಗಳ ಪ್ರತ್ಯಕ್ಷ ಪರೀಕ್ಷೆಗೆ ಪುರಾವೆಗಳಿಲ್ಲ ಎಂದು ತಲೆಕೆಡಿಸಿಕೊಂಡಿಲ್ಲ. ಎಲ್ಲವೂ ಮಿಥಿಕ ಸುಳಿವುಗಳು. ಭೌತಿಕ ಪ್ರಮಾಣಗಳನ್ನು ಸುಲಭವಾಗಿ ಅಳಿಸಲು ಸಾಧ್ಯವಾಗುವುದಿಲ್ಲ. ಪುರಾಣವು ಪ್ರಯೋಗವನ್ನು ಬೇಡುವ ವಿಜ್ಞಾನಕ್ಕೆ ಸಾಕ್ಷಿಯಾಗಲಾರದು.

ವಿಜ್ಞಾನದ ಆವಿಷ್ಕಾರಗಳು ಕಳೆದ ಎರಡು ಮೂರು ಶತಮಾನಗಳಲ್ಲಿ ಜಗತ್ತನ್ನು ಬದಲಿಸಿಬಿಟ್ಟಿವೆ. ಪ್ರತಿಯೊಂದು ಆವಿಷ್ಕಾರಕ್ಕೂ ಮೂಲಧಾತುವಿನಿಂದ ಹಿಡಿದು ಅಂತಿಮ ವಸ್ತುರೂಪದವರೆಗೂ ಅನುಕ್ರಮಣೀಯ ವಿಕಾಸದ ದಾಖಲೆಗಳಿರುತ್ತವೆ. ಅದು ಹಲವು ಸೃಜನಾತ್ಮಕ ಮನಸ್ಸುಗಳ ಮೇರು ಸಾಧನೆ. ದುರದೃಷ್ಟವಶಾತ್ ಆಧುನಿಕ ಜಗತ್ತಿಗೆ ಭಾರತಮೂಲವಾದ ಹೇಳಿಕೊಳ್ಳುವಂಥ ವೈಜ್ಞಾನಿಕ ಸೃಷ್ಟಿಯ ಕೊಡುಗೆ ಆಗಿಲ್ಲ. ಅದಕ್ಕಾಗಿ ನಾವು ನಾಚಿಕೆ ಪಟ್ಟುಕೊಳ್ಳಬೇಕಾದ ಅಗತ್ಯವೂ ಇಲ್ಲ. (ಈ ವಿಷಯದಲ್ಲಿ ಲಂಕೇಶ್ 'ನಾವು ಒಂದು ಬಲ್ಬ್ ಕಂಡುಹಿಡಿಯಕ್ಕಾಗಿಲ್ವಲ್ರೀ' ಎಂದು ಸ್ವಮರುಕ ಪಟ್ಟುಕೊಳ್ಳುತ್ತಿದ್ದುದು ನೆನಪಿಗೆ ಬರುತ್ತಿದೆ). ಸತ್ಯ ಮತ್ತು ನಂಬಿಕೆಗಳ ನಡುವಿನ ವ್ಯತ್ಯಾಸವನ್ನು ಕುರಿತು ದೀಘನಾಕ ಎಂಬ ಮುನಿಗೆ ಬುದ್ಧ ಹೇಳಿದ ಈ ಕಥೆ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ.

ಒಂದು ಊರಿನಲ್ಲಿ ವಿದುರನೊಬ್ಬ ತನ್ನ ಐದು ವರ್ಷದ ಮಗನೊಂದಿಗೆ ವಾಸಿಸುತ್ತಿದ್ದ. ತಾಯಿ ಇಲ್ಲದ ಆ ಮಗುವನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚು ಪ್ರೀತಿಸುತ್ತಿದ್ದ. ಒಂದು ದಿನ ಒಬ್ಬನೆ ಮಗನನ್ನು ಮನೆಯಲ್ಲಿ ಬಿಟ್ಟು ವ್ಯಾಪಾರಕ್ಕೆಂದು ಹೊರ ಹೊರಟ. ಆ ದಿನ ದರೋಡೆಕೊರರು ಆ ಊರಿಗೆ ನುಗ್ಗಿ ದಾಳಿ ಮಾಡಿ ಜನರಿಂದ ನಗ ನಾಣ್ಯ ಲೂಟಿ ಮಾಡಿ ಮನೆಗಳನ್ನು ಸುಟ್ಟು ಈ ಹುಡುಗನನ್ನು ಅಪಹರಿಸಿಕೊಂಡು ಹೋಗುತ್ತಾರೆ. ಮರುದಿನ ವಿದುರ ಬಂದು ನೋಡುತ್ತಾನೆ; ಇಡೀ ಊರೇ ನಾಶವಾಗಿದೆ. ತನ್ನ ಮನೆಯೂ ಸುಟ್ಟು ಬೂದಿಯಾಗಿದೆ. ಅದರ ಮಧ್ಯೆ ಸುಟ್ಟು ಕರಕಲಾದ ಒಂದು ಸಣ್ಣ ಮಗುವಿನ ಹೆಣವೂ ಬಿದ್ದಿದೆ. ಅದು ತನ್ನ ಮಗನದೇ ಎಂದು ಭ್ರಮಿಸಿ ವಿದುರ ಗೋಳಾಡುತ್ತಾನೆ. ಇದ್ದ ಒಬ್ಬನೇ ಮಗ ಕಳೆದು ಹೋದನೆಂದು ದುಃಖಿಸುತ್ತಾ ಶವಸಂಸ್ಕಾರವನ್ನು ಮಾಡಿ ಅದರ ಬೂದಿಯನ್ನು ಒಂದು ಚೀಲದೊಳಗೆ ತುಂಬಿಟ್ಟುಕೊಳ್ಳುತ್ತಾನೆ. ತನ್ನ ಮುದ್ದಿನ ಮಗನ ಶವದ ಬೂದಿಯೆಂದು ಹೋದಲ್ಲೆಲ್ಲಾ ಕೊಂಡೊಯ್ಯುತ್ತಾನೆ.

ಕೆಲವು ತಿಂಗಳುಗಳ ನಂತರ ಆ ಹುಡುಗ ದರೋಡೆಕೋರರಿಂದ ತಪ್ಪಿಸಿಕೊಂಡು ಮಧ್ಯರಾತ್ರಿಯಲ್ಲಿ ಮನೆಗೆ ಹಿಂದಿರುಗುತ್ತಾನೆ. ತನ್ನ ಅಪ್ಪನನ್ನು ನೋಡುವ ಕಾತರದಿಂದ  ಜೋರಾಗಿ ಬಾಗಿಲು ಬಡಿಯುತ್ತಾನೆ. ಅದೇ ವೇಳೆ ತಂದೆ ಶವದ ಬೂದಿಯ ಚೀಲವನ್ನು ಅಪ್ಪಿಕೊಂಡು ಶೋಖಿಸುತ್ತಿರುತ್ತಾನೆ. ಮಗ ತಾನು ಬಂದಿರುವೆನೆಂದು ಕೂಗಿ ಕರೆದರೂ ಇವನು ಬಾಗಿಲು ತೆಗೆಯುದಿಲ್ಲ. ಇವನಿಗೆ ತನ್ನ ಮಗ ಸತ್ತು ಹೋಗಿರುವನೆಂಬ ಅಚಲವಾದ ನಂಬಿಕೆ. ಯಾರೋ ಪಕ್ಕದ ಮನೆಯ ಹುಡುಗ ನನ್ನ ದುಃಖವನ್ನು ಅಣಕಿಸಲು ಬಂದಿದ್ದಾನೆಂದುಕೊಂಡು ಇವನು ಬಾಗಿಲನ್ನು ತೆಗೆಯುವುದೇ ಇಲ್ಲ. ಬೇರೆ ದಾರಿ ಕಾಣದೆ ಆ ಹುಡುಗ ನಿರಾಶನಾಗಿ ಹೊರಟುಬಿಡುತ್ತಾನೆ. ತಂದೆ ಮತ್ತು ಮಗ ಶಾಶ್ವತವಾಗಿ ಬೇರೆಯಾಗಿಬಿಡುತ್ತಾರೆ.

ನಾವು ನಮ್ಮ ನಂಬಿಕೆಗಳಿಗೆ ವ್ಯಾಮೋಹಿಯಂತೆ ಅಂಟಿಕೊಂಡುಬಿಟ್ಟರೆ ನಿಜವು ತಿಳಿಯುವುದೇ ಇಲ್ಲ. ಸತ್ಯ ಬಂದು ಮನೆಯ ಕದವನ್ನು ತಟ್ಟಿದರೂ ತೆಗೆಯಲು ಸಿದ್ಧರಾಗುವುದಿಲ್ಲ. ನಿಜದ ದರ್ಶನವಾಗಬೇಕಾದರೆ ಮನಸ್ಸನ್ನು ಮುಕ್ತವಾಗಿಟ್ಟುಕೊಳ್ಳವುದು ಅವಶ್ಯಕ. ನಮ್ಮ ದೇಶದ ಬಗ್ಗೆ, ಸಂಸ್ಕೃತಿಯ ಬಗ್ಗೆ ಹೆಮ್ಮೆ ಪಡಲು ಹಲವಾರು ವಿಷಯಗಳಿವೆ. ಅವುಗಳನ್ನು ಬಿಟ್ಟು ಇಲ್ಲದಿರುವುದರ ಬಗ್ಗೆ  ಹಳಹಳಿಕೆ ತನಗೆ ಸೇರದ ಶವದ ಬೂದಿಯನ್ನು ಎದೆಗಪ್ಪಿಕೊಂಡು ಅತ್ತಂತೆಯೆ ಸರಿ.

■ ವೈನತೇಯ

## ಮಾತೇ ಮುತ್ತು

★ ನೀವು ದ್ವೇಷ ಮತ್ತು ಅಸೂಯೆಗಳನ್ನು ಹೊರಸೂಸಿದರೆ ಅವುಗಳು ಚಕ್ರಬಡ್ಡಿ ಸಮೇತ ನಿಮಗೇ ಹಿಂತಿರುಗುತ್ತವೆ. ಯಾವ ಶಕ್ತಿಯೂ ಅದನ್ನು ತಡೆಯಲಾಗದು.

–ಸ್ವಾಮಿ ವಿವೇಕಾನಂದ

★ ಶಾಂತಿಯು ಹರಡುವ ತಿಳುವಳಿಕೆ ನನಗೆ ಬೇಕಿಲ್ಲ. ತಿಳುವಳಿಕೆ ಹರಡುವ ಶಾಂತಿ ನನಗೆ ಬೇಕು.

–ಹೆಲನ್ ಕೆಲ್ಲರ್

★ ಸಾಯುವುದಕ್ಕೆ ನೂರಾರು ಕಾರಣಗಳಿವೆ; ಆದರೆ ಕೊಲ್ಲುವುದಕ್ಕೆ ಯಾವ ಸಕಾರಣಗಳನ್ನೂ ನೀಡಲಾಗದು.

–ಆಲ್ಬರ್ಟ್ ಕಾಮೂ

★ ತಿಳುವಳಿಕೆಯುಳ್ಳ ಮನುಷ್ಯ ತನ್ನ ವೈರಿಗಳನ್ನು ಪ್ರೀತಿಸಿದಂತೆಯೇ, ಸ್ನೇಹಿತರನ್ನು ದ್ವೇಷಿಸುವುದನ್ನೂ ತಿಳಿದುಕೊಂಡಿರಬೇಕು.

–ಫ್ರೆಡ್ರಿಕ್ ನೀಟ್ಷೆ

★ ಮೂರನೇ ವಿಶ್ವಯುದ್ಧದಲ್ಲಿ ಯಾವ ಆಯುಧಗಳನ್ನು ಬಳಸಬಹುದು ಎನ್ನುವುದು ನನಗೆ ಗೊತ್ತಿಲ್ಲ. ಆದರೆ ನಾಲ್ಕನೇ ವಿಶ್ವಯುದ್ಧವಾದರೆ ಕಲ್ಲು ದೊಣ್ಣೆಗಳೇ ಆಯುಧಗಳಾಗುತ್ತವೆ.

–ಆಲ್ಬರ್ಟ್ ಐನ್‌ಸ್ಟೀನ್

★ ದುಃಖ ದಿನದಿನ ಬಂದು ಇರಿದಿರಿದು ಪೋಗೆ
ಹರ್ಷ ವರ್ಷಕ್ಕೊಮ್ಮೆ ಇಣಿಕಿನೋಡೆ
ಬದುಕಿಗೂ ಸಾವಿಗೂ ನಡುವೆ ನಿಂದು
ಈ ಭೂಮಿ ಈ ಚೆಲುವು ನಮ್ಮದೆಂದು
ಹೊತ್ತ ಹೊರೆ ಬಲು ಹಗುರವೆನ್ನದವ ಕವಿಯೆ?

–ಕೆ.ಎಸ್.ನರಸಿಂಹಸ್ವಾಮಿ

★ ಮಹಿಳೆ ಆಲೋಚನೆ ಮಾಡುವುದಕ್ಕೆ ಯಾರೂ ಅಡ್ಡಿ ಮಾಡುವುದಿಲ್ಲ; ಆಕೆ ಪುರುಷನ ಬಗ್ಗೆ ಆಲೋಚಿಸಿದರೆ ಮಾತ್ರ ಅಡ್ಡಿ ಉಂಟಾಗುತ್ತದೆ.

–ವರ್ಜೀನಿಯಾ ವೂಲ್ಫ್

★ ಸಿರಿಸುತರು ಕಾನೂನುಗಳ ರಚಿಸುತಿಹರು
ಬಡವರದಕೊಳಗಾಗಿ ಗೋಳಾಡುತಿಹರು;
ಸಿರಿಸುತರ ಬೊಬ್ಬೆಯಲಿ ಬಡಜನರ ದನಿಯು
ಸಾಗರದ ನಡುವೆ ಇಹ ತುಂತುರಿನ ಹನಿಯು!

–ಕುವೆಂಪು

★ ಹುಚ್ಚಿನ ಸ್ಪರ್ಶವಿಲ್ಲದ ಶ್ರೇಷ್ಠ ಮನಸ್ಸುಗಳು ಜಗತ್ತಿನಲ್ಲಿ ಯಾವತ್ತೂ ಇರಲಿಲ್ಲ.

–ಅರಿಸ್ಟಾಟಲ್

★ ಯಾರೂ ಕೇಳುತ್ತಿಲ್ಲ ಎನ್ನುವಂತೆ ಹಾಡಿ. ಹಿಂದೆಂದೂ ನೋವುಗಳೇ ಆಗಿಲ್ಲ ಎನ್ನುವಂತೆ ಪ್ರೀತಿಸಿ. ಯಾರೂ ನೋಡುತ್ತಿಲ್ಲ ಎಂದುಕೊಂಡು ನರ್ತಿಸಿ. ಭೂಮಿಯೇ ಸ್ವರ್ಗ ಎನ್ನುವಂತೆ ಬದುಕಿ.

–ಮಾರ್ಕ್ ಟ್ವೈನ್

★ ಕೆಲವರಷ್ಟೇ ಮಳೆಯನ್ನು ಅನುಭವಿಸುತ್ತಾರೆ; ಉಳಿದವರು ಸುಮ್ಮನೆ ತೋಯಿಸಿಕೊಳ್ಳುತ್ತಾರೆ.

–ಬಾಬ್ ಮಾರ್ಲೆ